ಭಾರತ 2023 INDIA
ವಸುಧೈವ ಕುಟುಂಬಕಂ

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು – 560 001.

ಸಂಖ್ಯೆ: ಕಾಶಿಇ/ಶೈವಿ/22/ಸುತ್ತೋಲೆ/2023-24 ದಿನಾಂಕ: 11.09.2023

# ಸುತ್ತೋಲೆ

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ 'ಕಾಲೇಜು ಅಭಿವೃದ್ಧಿ ಸಮಿತಿ'ಯನ್ನು ರಚಿಸುವ ಬಗ್ಗೆ.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ: ಇಡಿ 191 ಡಿಸಿಇ 1996 ಬೆಂಗಳೂರು, ದಿನಾಂಕ: 27.08.1996.
2) ಸರ್ಕಾರಿ ಆದೇಶ ಸಂಖ್ಯೆ: ಇಡಿ 188 ಯುಇಸಿ 2013 ಬೆಂಗಳೂರು, ದಿನಾಂಕ: 19.08.2013.
3) ಸರ್ಕಾರದ ಆದೇಶ ಸಂಖ್ಯೆ: ಇಡಿ 328 ಯುಇಸಿ 2013 ದಿನಾಂಕ:10.02.2014.

* * * * * *

ಉಲ್ಲೇಖಿತ-1ರ ಸರ್ಕಾರಿ ಆದೇಶದನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯನ್ನು ರಚಿಸಲಾಗುತ್ತಿದ್ದು, ಪ್ರಸ್ತುತ ಉಲ್ಲೇಖಿತ-2 ಮತ್ತು 3ರ ಸರ್ಕಾರದ ಆದೇಶಗಳಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯನ್ನು ರಚಿಸುವ ಬಗ್ಗೆ ಪರಿಷ್ಕೃತ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಅದರಂತೆ, ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯನ್ನು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಹೊಸದಾಗಿ ರಚನೆ ಮಾಡಿ, ಅನುಮೋದನೆಗಾಗಿ ಸೂಕ್ತ ಪ್ರಸ್ತಾವನೆಗಳನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಅಡಕ: ಉಲ್ಲೇಖಿತ ಪತ್ರಗಳ ಪ್ರತಿ

ಕಾಲೇಜು ಶಿಕ್ಷಣ ನಿರ್ದೇಶಕರು
11/9/23

ಇವರಿಗೆ:

ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಯನ್ನು:
1) ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯ ಆಡಳಿತಾಧಿಕಾರಿಗಳು, ಜಂಟಿ ನಿರ್ದೇಶಕರು, ರವರ ಆಪ್ತಶಾಖೆ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಮಾಹಿತಿಗಾಗಿ.
2) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗ.- ಸೂಕ್ತ ಕ್ರಮಕ್ಕಾಗಿ.
3) ಮಾಹಿತಿ & ತಂತ್ರಜ್ಞಾನ ಅಧಿಕಾರಿ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು. –ಇಲಾಖಾ *ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.*
4) ಕಛೇರಿ ಪ್ರತಿ.

ಅ-2

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ:ಇಡಿ 191 ಡಿಸಿಇ 96, ದಿನಾಂಕ: 27-08-1996.

**ಪ್ರಸ್ತಾವನೆ:**

ಕಾಲೇಜು ಅಭಿವೃದ್ಧಿ ಸಮಿತಿಯು ಕಾಲೇಜಿನ ಕಟ್ಟಡ, ಪೀಠೋಪಕರಣ ವ್ಯವಸ್ಥೆ, ಗ್ರಂಥಾಲಯ ವ್ಯವಸ್ಥೆ ಇವುಗಳ ಸಂಬಂಧ ಸಂಪನ್ಮೂಲ ಸಂಗ್ರಹಣೆ ಹಾಗೂ ಇನ್ನಿತರ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಲ್ಲದೆ ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ಕೆಳಕಂಡಂತೆ ಸದಸ್ಯರನ್ನೊಳಗೊಂಡು ಕಾಲೇಜು ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿರುತ್ತದೆ.

| ಕ್ರ.ಸಂ. | ಹೆಸರು ಶ್ರೀ/ಶ್ರೀಮತಿ | ಪದನಾಮ |
|---|---|---|
| 1. | ಸ್ಥಳೀಯ ವಿಧಾನ ಸಭಾ ಸದಸ್ಯರು | ಅಧ್ಯಕ್ಷರು |
| 2. | ಕಾಲೇಜು ಅಸ್ತಿತ್ವದಲ್ಲಿರುವ ಸ್ಥಳದಲ್ಲಿ ವಿಧಾನ ಪರಿಷತ್ತಿನ ಸದಸ್ಯರು ನಿವಾಸಿಗಳಾಗಿದ್ದಲ್ಲಿ ಅಂತಹ ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 3. | ಜಿಲ್ಲಾ ಪಂಚಾಯತ್ ಅಧ್ಯಕ್ಷರು | ಸದಸ್ಯರು |
| 4. | ಜಿಲ್ಲಾ ಪಂಚಾಯತ್ ಸ್ಥಳೀಯ ಸದಸ್ಯರು | ಸದಸ್ಯರು |
| 5. | ನಗರ : ಪುರಸಭೆ ಅಧ್ಯಕ್ಷರು ಅಥವಾ ಸದಸ್ಯರು | ಸದಸ್ಯರು |
| 6. | ನಿವೃತ್ತಿ ಹೊಂದಿರುವ ಶಿಕ್ಷಣ ತಜ್ಞರು | ಸದಸ್ಯರು |
| 7. | ನಿವೃತ್ತಿ ಹೊಂದಿರುವ ಶಿಕ್ಷಣ ತಜ್ಞರು | ಸದಸ್ಯರು |
| 8. | ನಿವೃತ್ತಿ ಹೊಂದಿರುವ ಶಿಕ್ಷಣ ತಜ್ಞರು | ಸದಸ್ಯರು |
| 9. | ಸ್ಥಳೀಯ ವ್ಯಾಪಾರಸ್ಥರು | ಸದಸ್ಯರು |
| 10. | ಸ್ಥಳೀಯ ವ್ಯಾಪಾರಸ್ಥರು | ಸದಸ್ಯರು |
| 11. | ಸ್ಥಳೀಯ ವ್ಯಾಪಾರಸ್ಥರು | ಸದಸ್ಯರು |
| 12. | ಸ್ಥಳೀಯ ಕೈಗಾರಿಕೋದ್ಯಮಿಗಳು | ಸದಸ್ಯರು |
| 13. | ಸ್ಥಳೀಯ ಕೈಗಾರಿಕೋದ್ಯಮಿಗಳು | ಸದಸ್ಯರು |
| 14. | ಸ್ಥಳೀಯ ಕೈಗಾರಿಕೋದ್ಯಮಿಗಳು | ಸದಸ್ಯರು |
| 15. | ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಪ್ರತಿನಿಧಿ | ಸದಸ್ಯರು |
| 16. | ಹಿಂದುಳಿದ ವರ್ಗಗಳ ಪ್ರತಿನಿಧಿ | ಸದಸ್ಯರು |
| 17 | ಮಹಿಳಾ ಪ್ರತಿನಿಧಿ | ಸದಸ್ಯರು |

BLB 19/8/2013

| | | |
|---|---|---|
| 18. | ವಿದ್ಯಾರ್ಥಿಗಳ ಪ್ರತಿನಿಧಿ (ಕಾಲೇಜಿನ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಪ್ರಧಾನ ಕಾರ್ಯದರ್ಶಿ) | ಸದಸ್ಯರು |
| 19. | ಕಾಲೇಜಿನ ಪ್ರಾಂಶುಪಾಲರು | ಸದಸ್ಯ ಕಾರ್ಯದರ್ಶಿ |
| 20. | ಕಾಲೇಜಿನ ರಿಜಿಸ್ಟ್ರಾರ್ | ಖಜಾಂಚಿ |

ಸದರಿ ಕಾಲೇಜು ಅಭಿವೃದ್ಧಿ ಸಮಿತಿಯನ್ನು ರಚಿಸುವ ಕುರಿತು ಮೇಲ್ಕಂಡ ಆದೇಶವನ್ನು ಮಾರ್ಪಡಿಸಿ ಕಾಲೇಜು ಶಿಕ್ಷಣ ಆಯುಕ್ತರ ಹಂತದಲ್ಲಿಯೇ ಆದೇಶ ಹೊರಡಿಸುವುದು ಸೂಕ್ತವೆಂದು ತೀರ್ಮಾನಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ: ಇಡಿ 188 ಯುಇಸಿ 2013 ಬೆಂಗಳೂರು, ದಿನಾಂಕ:19-08-2013</u>**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯನ್ನು ರಚಿಸುವ ಸಂಬಂಧದಲ್ಲಿ ಪ್ರಥಮವಾಗಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಕಾಲೇಜು ಅಭಿವೃದ್ಧಿ ಸಮಿತಿಯನ್ನು ರಚಿಸಲು, ಆದೇಶವನ್ನು ಹೊರಡಿಸಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

| ಕ್ರ. ಸಂ. | ಪದನಾಮ | |
|---|---|---|
| 1 | ಸ್ಥಳೀಯ ವಿಧಾನ ಸಭಾ ಸದಸ್ಯರು | ಅಧ್ಯಕ್ಷರು |
| 2 | ಕಾಲೇಜು ಅಸ್ತಿತ್ವದಲ್ಲಿರುವ ಸ್ಥಳದಲ್ಲಿ ವಿಧಾನ ಪರಿಷತ್ತಿನ ಸದಸ್ಯರು ನಿವಾಸಿಗಳಾಗಿದ್ದಲ್ಲಿ ಅಂತಹ ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 3 | ಜಿಲ್ಲಾ ಪಂಚಾಯತ್ ಅಧ್ಯಕ್ಷರು | ಸದಸ್ಯರು |
| 4 | ಜಿಲ್ಲಾ ಪಂಚಾಯತ್ ಸ್ಥಳೀಯ ಸದಸ್ಯರು | ಸದಸ್ಯರು |
| 5 | ನಗರ : ಪುರಸಭೆ ಅಧ್ಯಕ್ಷರು ಅಥವಾ ಸದಸ್ಯರು | ಸದಸ್ಯರು |
| 6 | ವಿದ್ಯಾರ್ಥಿಗಳ ಪ್ರತಿನಿಧಿ (ಕಾಲೇಜಿನ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಪ್ರಧಾನ ಕಾರ್ಯದರ್ಶಿ) | ಸದಸ್ಯರು |
| 7 | ಕಾಲೇಜಿನ ಪ್ರಾಂಶುಪಾಲರು | ಸದಸ್ಯ ಕಾರ್ಯದರ್ಶಿ |
| 8 | ಕಾಲೇಜಿನ ರಿಜಿಸ್ಟ್ರಾರ್ | ಖಜಾಂಚಿ |

ಮುಂದುವರೆದು, ಈ ಕೆಳಕಂಡ ಇತರೆ ಸದಸ್ಯರನ್ನು ಕಾಲೇಜು ಅಭಿವೃದ್ಧಿ ಸಮಿತಿಗೆ ನೇಮಕ ಮಾಡುವ ಸಂದರ್ಭದಲ್ಲಿ ಆಯಾಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳು ಆಯಾ ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನದಂತೆ ಹೆಸರುಗಳನ್ನು ಪಟ್ಟಿ ಮಾಡಿ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸುವುದು

ಅದರಂತೆಯೇ ನೇಮಕಾತಿ ಆದೇಶವನ್ನು ಹೊರಡಿಸುವ ಅಧಿಕಾರವನ್ನು ಕಾಲೇಜು ಶಿಕ್ಷಣ ಆಯುಕ್ತರಿಗೆ ಪ್ರತ್ಯಾಯೋಜಿಸಿದೆ.

| ಕ್ರ. ಸಂ. | ಹೆಸರು | ಪದನಾಮ |
|---|---|---|
| 1. | ನಿವೃತ್ತಿ ಹೊಂದಿರುವ ಶಿಕ್ಷಣ ತಜ್ಞರು | ಸದಸ್ಯರು |
| 2. | ನಿವೃತ್ತಿ ಹೊಂದಿರುವ ಶಿಕ್ಷಣ ತಜ್ಞರು | ಸದಸ್ಯರು |
| 3. | ನಿವೃತ್ತಿ ಹೊಂದಿರುವ ಶಿಕ್ಷಣ ತಜ್ಞರು | ಸದಸ್ಯರು |
| 4. | ಸ್ಥಳೀಯ ವ್ಯಾಪಾರಸ್ಥರು | ಸದಸ್ಯರು |
| 5. | ಸ್ಥಳೀಯ ವ್ಯಾಪಾರಸ್ಥರು | ಸದಸ್ಯರು |
| 6. | ಸ್ಥಳೀಯ ವ್ಯಾಪಾರಸ್ಥರು | ಸದಸ್ಯರು |
| 7. | ಸ್ಥಳೀಯ ಕೈಗಾರಿಕೋದ್ಯಮಿಗಳು | ಸದಸ್ಯರು |
| 8. | ಸ್ಥಳೀಯ ಕೈಗಾರಿಕೋದ್ಯಮಿಗಳು | ಸದಸ್ಯರು |
| 9. | ಸ್ಥಳೀಯ ಕೈಗಾರಿಕೋದ್ಯಮಿಗಳು | ಸದಸ್ಯರು |
| 10. | ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಪ್ರತಿನಿಧಿ | ಸದಸ್ಯರು |
| 11. | ಹಿಂದುಳಿದ ವರ್ಗಗಳ ಪ್ರತಿನಿಧಿ | ಸದಸ್ಯರು |
| 12. | ಮಹಿಳಾ ಪ್ರತಿನಿಧಿ | ಸದಸ್ಯರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಡಿ.ಸುಗುಣ 19/8
(ಡಿ.ಸುಗುಣ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ).

## ಕಾಲೇಜು ಶಿಕ್ಷಣ ಇಲಾಖೆ

ದೂರವಾಣಿ: 080-22343904/05.
e-mail: dce.academic@gmail.com

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು - 560 001.

ಸಂಖ್ಯೆ: ಕಾಶಿಇ/ಶೈವಿ/50/ಕಾ.ಅ.ಸ/2013-14

ದಿನಾಂಕ: 21.08.2013

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯನ್ನು ರಚಿಸುವ ಬಗ್ಗೆ ಹೊರಡಿಸಲಾಗಿರುವ ಮೇಲ್ಕಾಣಿಸಿದ ಸರ್ಕಾರದ ಆದೇಶ ಸಂಖ್ಯೆ: ಇಡಿ 188 ಯುಇಸಿ 2013 ಬೆಂಗಳೂರು. ದಿನಾಂಕ: 19.08.2013 ನ್ನು ಈ ಕೆಳಕಂಡವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಪರಿಚಲಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - *ಮೇಲ್ಕಂಡ ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿರುವಂತೆ ಕಾಲೇಜು ಅಭಿವೃದ್ಧಿ ಸಮಿತಿಗೆ ಸದಸ್ಯರನ್ನು ನೇಮಕ ಮಾಡುವ ಸಂದರ್ಭದಲ್ಲಿ ಪ್ರಾಂಶುಪಾಲರುಗಳು ಕಡ್ಡಾಯವಾಗಿ ಆಯಾ ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನದಂತೆ ಹೆಸರುಗಳನ್ನು ಪಟ್ಟಿ ಮಾಡಿ ಸೂಕ್ತ ಪ್ರಸ್ತಾವನೆಗಳನ್ನು ಮಾತ್ರ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು ಹಾಗೂ ಅಪೂರ್ಣ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುವುದಿಲ್ಲ.*

ಪ್ರತಿ:

1) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗ - ಮಾಹಿತಿ & ಅಗತ್ಯ ಕ್ರಮಕ್ಕಾಗಿ
2) ಮಾನ್ಯ ಆಯುಕ್ತರ, ನಿರ್ದೇಶಕರ, ಹೆಚ್ಚುವರಿ ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ ಮತ್ತು ಜಂಟಿ ನಿರ್ದೇಶಕರ ಆಪ್ತ ಶಾಖೆ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು
3) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು
4) ಮಾಹಿತಿ & ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು [illegible] ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು ಸೂಚಿಸಿದೆ.
5) ಕಛೇರಿ ಪ್ರತಿ